# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಷ್ಟ್ರೀಯ ಕೃಷಿ ವಿಮಾ ಯೋಜನೆ-2013 ಅನುಷ್ಟಾನಕ್ಕಾಗಿ ಪ್ರಮುಖ ದಿನಪತ್ರಿಕೆಗಳಲ್ಲಿ ಜಾಹಿರಾತು ನೀಡಿದ ಬಾಬ್ತಿಗೆ ಘಟನೋತ್ತರ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂ:ಕೃಇ/45/ಕೃಯೋಕಾ/2014, ದಿ: 11-04-2014.
2. ಸರ್ಕಾರದ ಆದೇಶ ಸಂ:ಕೃಇ/48/ಕೃಯೋಕಾ/2014, ದಿ: 09-05-2014.
3. ಕೃಷಿ ನಿರ್ದೇಶಕರ ಪತ್ರ ಸಂ:ಕೃವಾವಿ/26/ಪ್ರಕಟಣೆ/2013, ದಿ: 13-09-2013 ಮತ್ತು ದಿ:05-11-2013.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ (1) ದಿ: 11-04-2014ರ ಸರ್ಕಾರದ ಆದೇಶದಲ್ಲಿ ಬೇಸಾಯ ಸಂಬಂಧಿತ ಚಟುವಟಿಕೆಗಳ ಯೋಜನೆಯನ್ನು ಚಾಲ್ತಿ ಯೋಜನೆಯಾಗಿ ಲೆಕ್ಕ ಶೀರ್ಷಿಕೆ:2401-00-109-0-21 (ಯೋಜನೆ) (ಉಪ ಶೀರ್ಷಿಕೆ:059) 2014-15ನೇ ಸಾಲಿನಲ್ಲಿ ಮುಂದುವರೆಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮಾಂಕ (2) ದಿ: 09-05-2014ರ ಸರ್ಕಾರದ ಆದೇಶದಲ್ಲಿ ಕೃಷಿ ಇಲಾಖೆಯ 2014-15ನೇ ಸಾಲಿನಲ್ಲಿ ಚಾಲ್ತಿ ಯೋಜನೆಗಳಡಿ ಲೆಕ್ಕ ಶೀಷಿಕೆ: 2401-00-109-0-21 (ಯೋಜನೆ) ಮೊದಲನೇ ತ್ರೈಮಾಸಿಕಕ್ಕೆ ರೂ.23,17,50,000/- ಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಕ್ರಮಾಂಕ (3) ರಲ್ಲಿ ಓದಲಾದ ದಿ: 13-09-2013 ಮತ್ತು ದಿ:05-11-2013ರ ಕೃಷಿ ನಿರ್ದೇಶಕರ ಪ್ರಸ್ತಾವನೆಗಳಲ್ಲಿ 2013ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆ ಹಾಗೂ ಪ್ರಾಯೋಗಿಕ ಹವಾಮಾನ ಆಧಾರಿತ ಬೆಳೆವಿಮೆ ಯೋಜನೆಗಳಡಿ ರೈತರು ಪಾಲ್ಗೊಳ್ಳಲು ಅನುವಾಗುವಂತೆ ರೈತರ ತಿಳುವಳಿಕೆಗಾಗಿ ವ್ಯಾಪಕ ಪ್ರಚಾರ ಕೈಗೊಳ್ಳುವಂತೆ ಮಾನ್ಯ ಕೃಷಿ ರಾಜ್ಯ ಸಚಿವರು ಸೂಚಿಸಿದ ಮೇರೆಗೆ ದಿ: 12-07-2013 ರಂದು ಪ್ರಮುಖ ದಿನಪತ್ರಿಕೆಗಳಾದ ವಿಜಯಕರ್ನಾಟಕ, ಪ್ರಜಾವಾಣಿ, ಉದಯವಾಣಿ ಮತ್ತು ಕನ್ನಡಪ್ರಭ ಹಾಗೂ ದಿ: 19-07-2013 ರಂದು ವಿಜಯವಾಣಿ ದಿನಪತ್ರಿಕೆಯಲ್ಲಿ ಮೆ//ಮಾರ್ಕೆಟಿಂಗ್ ಕನ್ಸಲ್‌ಟೆಂಟ್ಸ್ & ಏಜೆನ್ಸೀಸ್ ಲಿಮಿಟೆಡ್, ಬೆಂಗಳೂರು ರವರ ಮುಖಾಂತರ ಪ್ರಕಟಿಸಲಾಗಿದೆ ಎಂದು ಕೃಷಿ ನಿರ್ದೇಶಕರು ತಿಳಿಸಿರುತ್ತಾರೆ.

ಮೆ//ಮಾರ್ಕೆಟಿಂಗ್ ಕನ್ಸಲ್‌ಟೆಂಟ್ಸ್ & ಏಜೆನ್ಸೀಸ್ ಲಿಮಿಟೆಡ್, ಬೆಂಗಳೂರು ರವರ ಮೂಲಕ ಮೇಲೆ ತಿಳಿಸಿದ ಪ್ರಮುಖ ಐದು ದಿನಪತ್ರಿಕೆಗಳಲ್ಲಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆ ಹಾಗೂ ಪ್ರಾಯೋಗಿಕ ಹವಾಮಾನ ಆಧಾರಿತ ಬೆಳೆವಿಮೆ ಯೋಜನೆಗಳಡಿ ರೈತರು ಪಾಲ್ಗೊಳ್ಳಲು ಅನುವಾಗುವ ಸಂಬಂಧ ಜಾಹೀರಾತು ಪ್ರಕಟಿಸಿದ ಬಾಬ್ತು ಕ್ರೆಡಿಟ್ ಬಿಲ್ಲು ನಂ:48499/2013-14, ದಿ: 07-08-2013 ರಂತೆ ರೂ.4,24,410.00 ಅನ್ನು ಸದರಿ ಸಂಸ್ಥೆಗೆ ಪಾವತಿಸಲು ಘಟನೋತ್ತರ ಮಂಜೂರಾತಿ ನೀಡುವಂತೆ ಕೋರಿತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/42/ಕೃಉಇ/2014, ಬೆಂಗಳೂರು,**
**ದಿನಾಂಕ: 19-05-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2013-14ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆ ಹಾಗೂ ಪ್ರಾಯೋಗಿಕ ಹವಾಮಾನ ಆಧಾರಿತ ಬೆಳೆವಿಮೆ ಯೋಜನೆಗಳಡಿ ರೈತರು ಪಾಲ್ಗೊಳ್ಳಲು ಅನುವಾಗುವಂತೆ ರೈತರ ತಿಳುವಳಿಕೆಗಾಗಿ ವ್ಯಾಪಕ ಪ್ರಚಾರ ಕೈಗೊಳ್ಳುವ ಸಲುವಾಗಿ ಮೆ//ಮಾರ್ಕೆಟಿಂಗ್ ಅಂಡ್ ಕನ್ಸಲ್‌ಟೆಂಟ್ಸ್ ಲಿಮಿಟೆಡ್, ಬೆಂಗಳೂರು ರವರ ಮೂಲಕ ಪ್ರಮುಖ ಐದು ದಿನಪತ್ರಿಕೆಗಳಾದ, ವಿಜಯಕರ್ನಾಟಕ, ಪ್ರಜಾವಾಣಿ, ಉದಯವಾಣಿ, ಕನ್ನಡಪ್ರಭ ಮತ್ತು ವಿಜಯವಾಣಿ ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸಿದ ಬಾಬ್ತು ಮೆ//ಮಾರ್ಕೆಟಿಂಗ್ ಅಂಡ್ ಕನ್ಸಲ್‌ಟೆಂಟ್ಸ್ ಲಿಮಿಟೆಡ್, ಬೆಂಗಳೂರು ರವರಿಗೆ ಈಗಾಗಲೇ 2014-15ನೇ ಸಾಲಿನಲ್ಲಿ ಕೃಷಿ ಇಲಾಖೆಗೆ ಮೊದಲನೇ ತ್ರೈಮಾಸಿಕದಲ್ಲಿ ಲೆಕ್ಕ ಶೀರ್ಷಿಕೆ:2401-00-109-0-21 ರಡಿ ಬಿಡುಗಡೆಯಾದ ಅನುದಾನದಲ್ಲಿ ರೂ.4,24,410.00 (ನಾಲ್ಕು ಲಕ್ಷದ ಇಪ್ಪತ್ತನಾಲ್ಕು ಸಾವಿರದ ನಾನ್ನೂರ ಹತ್ತು ರೂಪಾಯಿಗಳು ಮಾತ್ರ) ಲಕ್ಷಗಳನ್ನು ಪಾವತಿಸಲು ಘಟನೋತ್ತರ ಮಂಜೂರಾತಿ ನೀಡಿ ಆದೇಶಿಸಿದೆ.

ಸದರಿ ವೆಚ್ಚವನ್ನು 2014-15ನೇ ಸಾಲಿನ ರಾಜ್ಯವಲಯ ಯೋಜನೆ ಲೆಕ್ಕ ಶೀರ್ಷಿಕೆ:2401-00-109-0-21 (ಯೋಜನೆ) ಉಪ ಶೀರ್ಷಿಕೆ:059 ರಡಿಯಲ್ಲಿ ಭರಿಸತಕ್ಕದ್ದು.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**
**(ಮಂಜುನಾಥ್ ಪಾಟೀಲ್),**
**ಸರ್ಕಾರದ ಅಧೀನ ಕಾರ್ಯದರ್ಶಿ,**
**ಕೃಷಿ ಇಲಾಖೆ.**

**ಪ್ರತಿಯನ್ನು:-**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ-1, ಆರ್ಥಿಕ ಇಲಾಖೆ, ಬೆಂಗಳೂರು.
6. ಸರ್ಕಾರದ ಉಪಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ಬೆಂಗಳೂರು.
8. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
9. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
11. ಮೆ//ಮಾರ್ಕೆಟಿಂಗ್ ಕನ್ಸಲ್‌ಟೆಂಟ್ಸ್ & ಏಜೆನ್ಸೀಸ್ ಲಿಮಿಟೆಡ್, ಎಂಸಿ ಅಂಡ್ ಎ ಹೌಸ್, ಮಿಲ್ಲರ್ ರಸ್ತೆ, ಬೆಂಗಳೂರು-560 052.
12. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ.
13. ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕ, ಕೃಷಿ ಇಲಾಖೆ.
14. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.